ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3053/2023

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಯಶೋದಮ್ಮಾ
ಗಂಡನ ಹೆಸರು :- ಪುಟ್ಟರಾಮಯ್ಯ
ವಯಸ್ಸು :- 60 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ಉಜ್ಜನಿ

**ಸಾಕ್ಷಿಗೆ ದಿಃ 27.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿತರು ನನಗೆ ಗೊತ್ತು. ಚಾಸಾ 1 ನನ್ನ ಮಗ. 2 ವರೆ ವರ್ಷಗಳ ಹಿಂದೆ ಮದ್ಯಾಹ್ನ 3 ಗಂಟೆಯ ಸಮಯದಲ್ಲಿ ಉಜ್ಜನಿಯ ಅಂಬೆಡ್ಕರ ಭವನದ ಹತ್ತಿರ ಇರುವ 20 X 30ರ ಸೈಟ ಬಳಿ ಕೆಲಸ ಮಾಡುವ ಸಮಯದಲ್ಲಿ ಆರೋಪಿತರು ಅಲ್ಲಿಗೆ ಬಂದು ಹೊಡೆದಿರುತ್ತಾರೆ. ನಮ್ಮದು ಸೈಟ ಇರುತ್ತದೆ ಬರಬೇಡಎಂದು ನನಗೆ ಆರೋಪಿ 2 ಅವರ ಅಳಿಯ ನನಗೆ ಮಚ್ಚಿನಿಂದ ಬೆನ್ನಿಗೆ ಎಡಪಕ್ಕಗೆ ಮತ್ತು ಎಡತೋಳಿಗೆ ಹೊಡೆದಿರುತ್ತಾರೆ. ನಾನು ಕೆಳಗೆ ಬಿದ್ದಾಗ 4 ಜನರು ನನಗೆ ಹೊಡೆದಿರುತ್ತಾರೆ. ನನಗೆ ಬೈದಿರುತ್ತಾರೆ ನನ್ನ ಮಗನಿಗೆ ಅವನ ಸ್ನೇಹಿತ ವಿಚಾರ ತಿಳಿಸಿದ್ದು ನನ್ನ ಮಗ ಬಂದು ಹು.ದುರ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಕುಣಿಗಲ್ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ನನ್ನ ಮಗ ಪೊ. ಠಾಣೆಗೆ ದೂರನ್ನು ನೀಡಿದ್ದು ನಂತರ ಪೋಲಿಸರು 10.30 ರಿಂದ 11 ಗಂಟೆಯ ಸಮಯದಲ್ಲಿ ಸ್ಥಳಕ್ಕೆ ಬಂದಿದ್ದು ಸ್ಥಳವನ್ನು ನೋಡಿ ಮಚ್ಚನ್ನು

ತಗೆದುಕೊಂಡು ಬಂದಿರುತ್ತಾರೆ. ಮಹಜರಗೆ ನನ್ನ ಹೆಬ್ಬಟ್ಟಿನ ಗುರುತು ಇರುತ್ತದೆ ಅದನ್ನು ನಿ.ಪಿ 2 ಎಂದು ಗುರುತಿಸಲಾಯಿತು. ಮು. ಮಾ. ಅನ್ನು ಗುರುತಿಸುತ್ತೇನೆ. ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ದಿನಾಂಕ 24.12.2022 ಮದ್ಯಾಹ್ನ 2 ಗಂಟೆಯ ಸಮಯದಲ್ಲಿ ನಾನು ಸೈಟನಲ್ಲಿದ್ದಾಗ ಗಲಾಟೆ ಆಗಿರುತ್ತದೆ ಎಂದರೆ ಸರಿ. ನನ್ನ ಸೈಟಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮಗನಿಗೆ ಚಾಸಾ 3 ಅವರು ವಿಚಾರ ತಿಳಿಸಿರುತ್ತಾರೆ. ಸೈಟನ ವಿಚಾರಕ್ಕೆ ಬಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಸಹ ಹಾಕಿರುತ್ತಾರೆ ಎಂದರೆ ಸರಿ. ದಿಃ 27.12.2022 ರಂದು ಪೋಲಿಸರು 4 ರಿಂದ 5 ಗಂಟೆಯ ಸಮಯದಲ್ಲಿ ಸ್ಥಳಕ್ಕೆ ಚಾಸಾ 4 ಮತ್ತು 5 ಅವರು ಸಮಕ್ಷಮ ಸ್ಥಳ ಮಹಜರನ್ನು ನಾನು ತೋರಿಸಿದ ಸ್ಥಳದಲ್ಲಿ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರಃ ಬಿ.ಹೆಚ್.ಜೆ. ವಕೀಲರಿಂದಃ**

ನನ್ನನ್ನು ಬೇರೆ ಹೆಸರಿನಿಂದ ಕರೆಯುವುದಿಲ್ಲ. ನನಗೆ 4 ಜನ ಹೆಣ್ಣು ಮಕ್ಕಳು ಒಬ್ಬನೆ ಮಗ ಆರುತ್ತಾನೆ ಆತನ ಹೆಸರು ರಾಜೇಶ್ ಆಗಿದ್ದು ಆತನನ್ನು ಬೇರೆ ಹೆಸರಿನಿಂದ ಕರೆಯುವುದಿಲ್ಲ. ಗಲಾಟೆ ಆದ ಮಾರನೇ ದಿನ ಪೋಲಿಸರ ಸ್ಥಳಕ್ಕೆ ಬಂದಿರುತ್ತಾರೆ ಆ ದಿನ ಬಂದಿರುವುದಿಲ್ಲ. ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಬಂದಿರುತ್ತಾರೆ. ಆ ದಿನ ಮಚ್ಚನ್ನು ತಗೆದುಕೊಂಡು ಹೋಗಿರುವುದಿಲ್ಲ.ಮೂರನೆ ದಿನಕ್ಕೆ ಬಂದು ಮಚ್ಚನ್ನು ತಗೆದುಕೊಂಡು ಹೋಗಿರುತ್ತಾರೆ.

ಹು.ದುರ್ಗ ಆಸ್ಪತ್ರೆಗೆ ಎಷ್ಟು ಗಂಟೆಗೆ ಹೋಗಿದ್ದೀರಿ ಎಂದರೆ ಸಾಕ್ಷಿ ನನಗೆ ಜ್ಞಾನ ಹೋಗಿದ್ದು ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಕುಣಗಲ್ ಆಸ್ಪತ್ರೆಗೆ ನನ್ನ ಮಗ ಕರೆದುಕೊಂಡು ಹೋಗಿರುತ್ತಾರೆ. ನನ್ನ ಮಗನ ಜೊತೆ ಬೇರೆ ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಮಾರನೇ ದಿನ ಆಸ್ಪತ್ರೆಯಲ್ಲಿ ಜ್ಞಾನ ಬಂದಿರುತ್ತದೆಂದು ಹೇಳುತ್ತಾರೆ. ನಾನು 4-5 ದಿನ ದಾಖಲಾಗಿದ್ದೇ ಎಂದು ಹೇಳುತ್ತಾರೆ. ಅಲ್ಲಿ ಪೋಲಿಸರು ಬಂದಿದ್ದು ಏನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಹಿ ಯನ್ನು ಪಡೆದಿರುತ್ತಾರೆ. ಸದರಿ ಹೆಬ್ಬಟ್ಟನ್ನು ನಾನು ಗುರುತಿಸುತ್ತೇನೆ.

ಸಾಕ್ಷಿಗೆ ಮಹಜರನ್ನು ತೋರಿಸಿ ಅದಕ್ಕೆ ಹೆಬ್ಬಟಿನ ಗುರುತನ್ನು ಆಸ್ಪತ್ರೆಯಲ್ಲಿ ಪಡೆದಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅದೇ ಇರಬಹುದೆಂದು ಹೇಳುತ್ತಾರೆ. ಚಾಸಾ 3 ನನಗೆ ಪರಿಚಯ. ಅವರು ನಿಮಗೆ ಹೇಗೆ ಪರಿಚಯವೆಂದರೆ ಸಾಕ್ಷಿ ರಾಜಣ್ಣ ಅವರು ಜಮೀನಿನ ವ್ಯವಹಾರ ಮಾಡಿದ್ದು ಗೊತ್ತು ಎಂದು ಹೇಳುತ್ತಾರೆ. ರಾಜಣ್ಣ ಅವರು ಚುನಾವಣೆಯಲ್ಲಿ ಗೆದ್ದಿದ್ದರೂ ಎಂದರೆ ಸರಿಯಲ್ಲ.

ಈ ಘಟನೆ ಸಂಬಂದ ನಾನು ಪೋಲಿಸ ಠಾಣೆಗೆ ಹೋಗಿಲ್ಲ. ಸೈಟ ನನಗೆ ಸೇರಿರುವುದಿಲ್ಲ ಆರೋಪಿ 1 ಅವರ ಗಂಡ ಸದರಿ ಸೈಟನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಚಾಸಾ 3 ಅವರ ತಂದೆ ಪಂಚಾಯಿತಿಯ ಸದಸ್ಯರಾಗಿದ್ದು ಸದರಿ ಸೈಟನ್ನು ದಾಖಲೆಗಳನ್ನು ಮಾಡಿಕೊಂಡು ನನ್ನ ಹೆಸರಿಗೆ ಕ್ರಮ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸೈಟನ ವಿಚಾರವಾಗಿ ಆರೋಪಿತರ ಮತ್ತು ನಮ್ಮ ನಡುವೆ ವೈಶ್ಯಮ್ಯ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸೈಟ ಆರೋಪಿತರ ಸ್ವಾಧೀನದಲ್ಲಿದ್ದು ನಾನು ಅವರ ಸ್ವಾಧೀನವನ್ನು ಖಬಳಿಸುವ ಉದ್ದೇಶದಿಂದ ನನ್ನ ಮಗನ ಕಡೆಯಿಂದ ಸುಳ್ಳು ದೂರನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಕೊಲೆ ಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ. ಸದರಿ ಸೈಟ ನಮಗೆ ಸೇರದೆ ಇರುವ ಕಾರಣ ಅತಿಕ್ರಮ ಪ್ರವೇಶ ಮಾಡುವ ಪ್ರಶ್ನೆ ಬರುವುದಿಲ್ಲವೆಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲವೆಂದರೆ ಸರಿಯಲ್ಲ. ಆರೋಪಿತರಿಗೂ ಮು. ಮಾ. ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ. ಪೋಲಸರು ಯಾವುದೇ ಮಹಜರನ್ನು ಮಾಡಿಲ್ಲ ಚಾಸಾ 4 ಮತ್ತು 5 ಅವರ ಸಹಿ ಪಡೆದಿಲ್ಲವೆಂದರೆ ಸರಿಯಲ್ಲ.

ಆರೋಪಿ 1 ಅವರ ಗಂಡ ಸದರಿ ಸೈಟನ್ನು ಖರೀದಿ ಮಾಡಿದ್ದು ಅದನ್ನು ಖಬಳಿಸುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ ಆದರೂ ಸಹ ವೈದ್ಯರ ಜೊತೆ ಶಾಮಿಲಾಗಿ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಪಡೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.